ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	183
ಸದಸ್ಯರ ಹೆಸರು	ಶ್ರೀ ಎಸ್. ರುದ್ರೇಗೌಡ (ವಿಧಾನಸಭೆಯಿಂದ ಚುನಾಯಿತರಾದವರು)
ವಿಷಯ	ಸಾಮಾಜಿಕ ಭದ್ರತಾ ಯೋಜನೆ.
ಉತ್ತರಿಸಬೇಕಾದ ದಿನಾಂಕ	17.07.2019
ಉತ್ತರಿಸುವ ಸಚಿವರು	ಕಂದಾಯ ಸಚಿವರು
ಪ್ರಶ್ನೆ	**ಉತ್ತರ**
ಅ) ಮೇ 2018 ರಿಂದ ಜೂನ್ 2019 ಅಂತ್ಯಕ್ಕೆ ರಾಜ್ಯದಲ್ಲಿ ಸಂಧ್ಯಾ ಸುರಕ್ಷಾ ಮತ್ತು ವಿಧವಾ ವೇತನ ಯೋಜನೆಗಳಲ್ಲಿ ಎಷ್ಟು ಜನ ಫಲಾನುಭವಿಗಳಿಗೆ ಮಾಸಿಕ ವೇತನವನ್ನು ನೀಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು)	ರಾಜ್ಯದಲ್ಲಿ ಸಂಧ್ಯಾ ಸುರಕ್ಷಾ ಮತ್ತು ವಿಧವಾ ವೇತನ ಯೋಜನೆಗಳಡಿ ಮೇ-2018 ರಿಂದ ಜೂನ್-2019ರವರೆಗೆ ಹೊಸದಾಗಿ 390106 ಫಲಾನುಭವಿಗಳಿಗೆ ಮಾಸಿಕ ವೇತನ ನೀಡಲಾಗಿದೆ, ವಿವರ ಕೆಳಗಿನಂತಿದೆ. **ಯೋಜನೆ** — **ಫಲಾನುಭವಿಗಳ ಸಂಖ್ಯೆ** ಸಂಧ್ಯಾ ಸುರಕ್ಷಾ ಯೋಜನೆ — 256447 ವಿಧವಾ ವೇತನ ಯೋಜನೆ — 133659 **ಒಟ್ಟು** — **390106** ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.
ಆ) ಕಳೆದ ಹತ್ತು ತಿಂಗಳಿಂದ ಮಾಸಿಕ ವೇತನವನ್ನು ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;	ಸಾಮಾಜಿಕ ಭದ್ರತಾ ಯೋಜನೆಯಡಿ ಮಂಜೂರಾತಿ ನೀಡಲಾದ ಫಲಾನುಭವಿಗಳಿಗೆ ನೇರ ಹಣ ಸಂದಾಯ ಯೋಜನೆ ಜಾರಿಗೊಳಿಸುವ ನಿಟ್ಟಿನಲ್ಲಿ ಬ್ಯಾಂಕ್ ಖಾತೆ ವಿವರವನ್ನು ದಿನಾಂಕ:01/07/2018 ರಿಂದ ಕಡ್ಡಾಯಗೊಳಿಸಲಾಗಿದೆ. ವಿದ್ಯುನ್ಮಾನ ತಂತ್ರಾಂಶದ ಮೂಲಕ ಪಾರದರ್ಶಕವಾಗಿ ಪಿಂಚಣಿ ಪಾವತಿಸುವ ಸಲುವಾಗಿ ಖಜಾನೆ-2 ತಂತ್ರಾಂಶವನ್ನು ಜಾರಿಗೊಳಿಸಲಾಗಿದ್ದು, ಅರ್ಜಿ ಸ್ವೀಕರಿಸುವ ಸಂದರ್ಭದಲ್ಲಿ ಫಲಾನುಭವಿಯ ಬ್ಯಾಂಕ್ ಖಾತೆ ಸಂಖ್ಯೆ, IFSC ಹಾಗೂ ಪಿನ್ ಕೋಡ್ ವಿವರ ತಪ್ಪಾಗಿ ನಮೂದಾಗಿರುವ ಕೆಲವು ಪ್ರಕರಣಗಳಲ್ಲಿ ಪಿಂಚಣಿ ಪಾವತಿಯಾಗಿರುವುದಿಲ್ಲ. ಈ ನ್ಯೂನ್ಯತೆಯನ್ನು ಸರಿಪಡಿಸಲು ತಂತ್ರಾಂಶದಲ್ಲಿ ಅವಕಾಶವನ್ನು ಕಲ್ಪಿಸಿದ್ದು, ಸರಿಪಡಿಸಲಾದ ಮಾಹಿತಿಯನ್ನು ಖಜಾನೆಗೆ ವರ್ಗಾಯಿಸಿ ಪಿಂಚಣಿ ಪಾವತಿಗೆ ಕ್ರಮವಹಿಸಲಾಗುತ್ತಿದೆ.
ಇ) ಈ ಯೋಜನೆಗಳಲ್ಲಿ ನೀಡುತ್ತಿರುವ ಮಾಸಿಕ ವೇತನವನ್ನು ಹೆಚ್ಚಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ?	ಈ ಯೋಜನೆಗಳಡಿ ನೀಡುತ್ತಿರುವ ಮಾಸಿಕ ವೇತನ ಪಿಂಚಣಿ ಮೊತ್ತವನ್ನು ಹೆಚ್ಚಿಸುವ ಕುರಿತು ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಸಂಖ್ಯೆ: ಆರ್‌ಡಿ 265 ಡಿಎಸ್‌ಪಿ 2019

(ಆರ್.ವಿ ದೇಶಪಾಂಡೆ)
ಕಂದಾಯ ಸಚಿವರು

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಸ್.ರುದ್ರೇಗೌಡ (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 183ಕ್ಕೆ ಅನುಬಂಧ

Sl.no	District	Widow Pension	Sandya Suraksha Yojane	Total Sanctioned
1	Bagalkot	5248	10310	15558
2	Ballari	6270	6439	12709
3	Bangalore Rural	1920	2340	4260
4	Belagavi	11403	42964	54367
5	Bengaluru	9430	8301	17731
6	Bidar	4269	8637	12906
7	Chamarajanagar	2230	609	2839
8	Chikballapur	3455	9102	12557
9	Chikkamagaluru	2728	6101	8829
10	Chitradurga	4362	11764	16126
11	Dakshina Kannada	4282	8592	12874
12	Davanagere	6570	12000	18570
13	Dharwad	3019	4123	7142
14	Gadag	1650	1234	2884
15	Hassan	4103	4935	9038
16	Haveri	3961	10499	14460
17	Kalaburagi	5371	9812	15183
18	Kodagu	1365	2087	3452
19	Kolar	3028	6568	9596
20	Koppal	2610	3204	5814
21	Mandya	5248	4747	9995
22	Mysuru	7661	14649	22310
23	Raichur	7424	11240	18664
24	Ramanagara	2691	3198	5889
25	Shivamogga	4706	8722	13428
26	Tumakuru	6558	16618	23176
27	Udupi	2341	7210	9551
28	Uttara Kannada	2329	4538	6867
29	Vijayapura	4009	9485	13494
30	Yadgir	3418	6419	9837
Total		**133659**	**256447**	**390106**